ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೇ, 8-10 ವರ್ಷಗಳಿಂದ ಸೀನಿಯಾರಿಟಿ ಲಿಸ್ಟ್‌ನಲ್ಲಿ ಇರುವ ಹೆಸರುಗಳನ್ನು ಬಿಟ್ಟುಕೊಂಡು ನಿನ್ನೆ ತಾನೇ ಯಾರು ಹೆಸರು ನೋಂದಾವಣೆ ಮಾಡಿರುತ್ತಾರೆ ಅವರಿಗೆ ಇಂಟರ್‌ವ್ಯೂಗೆ ಬಿಡುಗಡೆ ಮಾಡಿರತಕ್ಕಂಥ ಉದಾಹರಣೆಗಳು ಇವೆ. ಹಣದ ಆಧಾರದ ಮೇಲೆ ಸೀನಿಯಾರಿಟಿ ಬಿಟ್ಟು ಪಟ್ಟಿ ಬಿಡುಗಡೆ ಮಾಡಿರತಕ್ಕಂಥಾದ್ದು. ಇದನ್ನು ತಡೆಗಟ್ಟುವಲ್ಲಿ ಸರ್ಕಾರ ವಿಫಲವಾಗಿದೆ. ಫೈಲ್‌ಗಳೇ ಮಿಸ್ ಆಗುತ್ತಿವೆ.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೇ, ಕಾಯ್ದೆ ಒಳಗಡೆ ಇರತಕ್ಕಂಥ ನಿಯಮಗಳಿಗೆ ಅನುಸಾರವಾಗಿ ನಾವು ಹೆಸರುಗಳನ್ನು ಕಳುಹಿಸಬೇಕಾಗುತ್ತದೆ. ಉದ್ದಿಮೆದಾರರು ಯಾವ ಅರ್ಹತೆ ಇರುವ ಅಭ್ಯರ್ಥಿಗಳು ಬೇಕು ಎಂದು ಕೇಳುತ್ತಾರೋ ಅದನ್ನು ಮಾತ್ರ ನಾವು ಕಳುಹಿಸಿ ಕೊಡಬೇಕಾಗುತ್ತದೆ. ನಿಯಮಗಳ ಪ್ರಕಾರ, ರೋಸ್ಟರ್, ವಿದ್ಯಾರ್ಹತೆ ಸೇವೆ ಇವುಗಳನ್ನು ನಾವು ಪರಿಶೀಲನೆ ಮಾಡಿ ಕಳುಹಿಸಬೇಕಾಗುತ್ತದೆ.

ಅಧ್ಯಕ್ಷರು : ಉತ್ತರ ಚೆನ್ನಾಗಿದೆ. ಯೋಚನೆ ಮಾಡಿ ನೀವು ಮತ್ತು ಸಿದ್ದರಾಮಯ್ಯನವರು. ಈ ಉದ್ಯೋಗ ವಿನಿಮಯ ಕೇಂದ್ರಗಳು ಇರಬೇಕೇ ಬೇಡವೇ ಎನ್ನುವ ಬಗ್ಗೆ.

ಶ್ರೀ ಸಿದ್ದರಾಮಯ್ಯ : ಈ ಉದ್ಯೋಗ ವಿನಿಮಯ ಕೇಂದ್ರಗಳು ಐ ಟಿ ಐ ಗಳನ್ನು ನಡೆಸುತ್ತಿದೆ. ಆದರೆ ಅಲ್ಲಿ ಕೆಲವು ಲೋಪದೋಷಗಳು ಇರಬಹುದು. ಅವುಗಳನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡೋಣ.

ಧಾರವಾಡ ಜಿಲ್ಲೆಯ ಅರಣ್ಯ ಇಲಾಖೆಯ ಕಾರ್ಯಕ್ರಮಗಳು

381 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣಾ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ಕಳೆದ 3 ವರ್ಷಗಳಲ್ಲಿ ಕೈಗೊಂಡ ಕಾರ್ಯಕ್ರಮಗಳಾವುವು, ಇದಕ್ಕಾಗಿ ಮಂಜೂರಾದ ಹಣವೆಷ್ಟು? ಮತ್ತು ಖರ್ಚಾದ ಹಣವೆಷ್ಟು ವಿವರ ನೀಡುವುದು?*

ಆ) *ಮುಂಬರುವ ವರ್ಷಗಳಲ್ಲಿ ಯಾವ ಕಾರ್ಯಕ್ರಮ ಮತ್ತು ಯೋಜನೆಗಳನ್ನು ಹಾಕಿಕೊಳ್ಳಲು ಯೋಜಿಸಲಾಗಿದೆ?*

ಶ್ರೀ. ಡಿ. ಮಂಜುನಾಥ್ (ಅರಣ್ಯ ಇಲಾಖೆ) :

ಅ) ಧಾರವಾಡ ಜಿಲ್ಲೆಯಲ್ಲಿ ಅರಣ್ಯ ಇಲಾಖಾವತಿಯಿಂದ ಕಳೆದ 3 ವರ್ಷಗಳಲ್ಲಿ ಕೈಗೊಂಡ ಕಾರ್ಯಕ್ರಮಗಳು ಈ ರೀತಿ ಇವೆ. ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಂಜೂರಾದ ಹಣ ಹಾಗೂ ಖರ್ಚು ಭರಿಸಿದ ವೆಚ್ಚದ ವಿವರಗಳನ್ನು ಸಹ ದಾಖಲಿಸಿದೆ.

	1995-96	1996-97	1997-78
ಭೌತಿಕ			
1) ಹಳೀ ನೆಡುತೋಪುಗಳ ನಿರ್ವಹಣೆ (ಹೆ)	2151.5	3269.5	2979
2) ಸಸಿಗಳ ನಿರ್ವಹಣೆ (ಲಕ್ಷ ಸಸಿ)	15.92	5.304	5.01
3) ನೆಡುತೋಪು ನಿರ್ಮಾಣ (ಹೆ)	3891.5	3000	2190.5
4) ಮುಂಗಡ ಕಾಂಗಾರಿ (ಹೆ)	1042	2077	5098
5) ಸಸಿ ಬೆಳೆಸುವಿಕೆ (ಲಕ್ಷ ಸಸಿ)	5.304	16.91	7.937
ಆರ್ಥಿಕ			
1) ಮಂಜೂರಾದ ಹಣ (ರೂ. ಲಕ್ಷ)	598.730	434.729	532.703
2) ಖರ್ಚು ಭರಿಸಿದ ವೆಚ್ಚ (ರೂ. ಲಕ್ಷ)	458.007	426.294	489.407

ಆ) 1998-99ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಈ ಕೆಳಕಂಡ ಅರಣ್ಯೀಕರಣ ಕಾರ್ಯಕ್ರಮವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಯೋಜನೆ	ಸಾರ್ವಜನಿಕರಿಗೆ ಸಸಿ ವಿತರಣೆ (ಲಕ್ಷ)	ನೆಡುತೋಪು ನಿರ್ಮಾಣ (ಹೆಕ್ಟೇರ್)	ಮುಂಗಡ ಕೆಲಸ ಹೆಕ್ಟೇರ್	ಸಸಿ ಬೆಳೆಸುವುದು ಲಕ್ಷ ಸಸಿ
1. ಪೂರ್ವ ಪ್ರಸ್ಥಭೂಮಿಯಲ್ಲಿ ಅರಣ್ಯೀಕರಣ ಪರಿಸರ ಯೋಜನೆ	10.945	2248 ಹೆ.	1786	12.079
2. ಜವಾಹರ್ ರೋಜಗಾರ್ ಯೋಜನೆ	-	29 ಹೆ.	65	0.450
3. ಸಮಗ್ರ ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆ	-	30 ಹೆ.	30	0.190
4. ಉದ್ಯೋಗ ಭರವಸೆ ಯೋಜನೆ	-	-	-	2.350
5. ನಗರ ಪ್ರದೇಶದ ಹಸರೀಕರಣ	-	5 ಹೆ.	-	-
6. ರಸ್ತೆ ಬದಿ ನೆಡುತೋಪು	-	8.5 ಹೆ.	-	-
7. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿ ಯೋಜನೆ	-	7 ಹೆ.	-	-
8. ಕಿರು ಅರಣ್ಯ ಉತ್ಪನ್ನ	-	3 ಹೆ.	-	0.022

ಯೋಜನೆ	ಸಾರ್ವಜನಿಕರಿಗೆ ಸಸಿ ವಿತರಣೆ (ಲಕ್ಷ)	ನೆಡುತೋಪು ನಿರ್ಮಾಣ (ಹೆಕ್ಟೇರ್)	ಮುಂಗಡ ಕೆಲಸ ಹೆಕ್ಟೇರ್	ಸಸಿ ಬೆಳೆಸುವುದು ಲಕ್ಷ ಸಸಿ
9. ಪರಿಹಾರಾತ್ಮಕ ನೆಡುತೋಪು	-	10ಹೆ.	-	0.182
10. ಪ್ರದೇಶಾಧಾರಿತ ಉರುವಲು ಮತ್ತು ಮೇವು ಯೋಜನೆ	-	-	-	0.910

ಇದಲ್ಲದೆ 1996-97 ಹಾಗೂ 1997-98ನೇ ಸಾಲಿನಲ್ಲಿ ಬೆಳೆಸಿದ 5190.5 ಹೆಕ್ಟೇರ್ ನೆಡುತೋಪುಗಳ ನಿರ್ವಹಣೆ ಕಾರ್ಯ ಕೈಗೊಳ್ಳಲಾಗುವುದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ನಾನು ಕೇಳಿದ್ದೆ. ಅವರು ಕೊಟ್ಟಂತಹ ಅಂಕಿಅಂಶಗಳನ್ನು ನಾನು ನೋಡಿದರೆ ಪ್ರತಿ ವರ್ಷ ಅವರ ಕಾರ್ಯಕ್ರಮ ಜಾಸ್ತಿಯಾಗುತ್ತಾ ಹೋಗುವುದರ ಬದಲಿ ಕಡಿಮೆಯಾಗುತ್ತಾ ಹೋಗುತ್ತಿದೆ. ನಾನು ಒಂದು ಉದಾಹರಣೆಯನ್ನು ಕೊಡುವುದಾದರೆ ಸಸಿಗಳ ನಿರ್ವಹಣೆ. 1995-96ನೇ ಸಾಲಿನಲ್ಲಿ 15.92 ಸಾವಿರ ನಿರ್ವಹಣೆ ಮಾಡಿದ್ದಾರೆ. 1996-97ಕ್ಕೆ 5 ಲಕ್ಷ ಸಸಿಗಳ ನಿರ್ವಹಣೆ ಮಾಡಿದ್ದಾರೆ. 1997-98 ಕ್ಕೆ 5,1 ಲಕ್ಷ ಮಾಡಿದ್ದಾರೆ. ನೆಡುತೋಪು ನಿರ್ಮಾಣ 1995-96ರಲ್ಲಿ 3891 ಮಾಡಿದರೆ 1996-97ರಲ್ಲಿ 3 ಸಾವಿರ ಮಾಡಿದ್ದಾರೆ. 1997-98ರಲ್ಲಿ 2180 ಹೆಕ್ಟೇರ್ ಮಾಡಿದ್ದಾರೆ. ಅಂದರೆ ಪ್ರತಿ ವರ್ಷ ಕಡಿಮೆಯಾಗುತ್ತಾ ಹೋಗಿದೆ. ಮಂಜೂರಾದ ಹಣ 1995-96ಕ್ಕೆ 598 ಲಕ್ಷ ಇದ್ದರೆ ಅದರಲ್ಲಿ ಅವರು ಖರ್ಚು ಮಾಡಿದ್ದು 458 ಲಕ್ಷ. ಅಂದರೆ 140 ಲಕ್ಷ ಖರ್ಚು ಮಾಡಲಿಲ್ಲ. 1996-97ಕ್ಕೆ 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿಲ್ಲ. 1997-98ಕ್ಕೆ 43 ಲಕ್ಷ ಖರ್ಚುಮಾಡಲಿಲ್ಲ. ಅವರ ಒಂದು ಕಾರ್ಯನಿರ್ವಹಣೆ ಪ್ರತಿ ವರ್ಷ ಕಡಿಮೆಯಾಗುತ್ತಿದೆ. ಇದಕ್ಕೆ ಏನು ಕಾರಣ ಎನ್ನುವುದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಹಣ ಎಷ್ಟು ಖರ್ಚು ಮಾಡಿದ್ದೇವೆ ಎನ್ನುವ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದೇವೆ. ಅವರ (ಅ) ಪ್ರಶ್ನೆಯಲ್ಲಿ ಮುಂಬರುವ ವರ್ಷಗಳಲ್ಲಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಯಾವ ಯಾವ ಯೋಜನೆಗಳನ್ನು ಹಾಕಿಕೊಂಡಿದೆ ಎಂದು ಕೇಳಿದ್ದಾರೆ. ಅದಕ್ಕೆ ಉತ್ತರ ಕೊಟ್ಟಿದ್ದೇವೆ. ಪ್ರತಿ ವರ್ಷವೂ ಈ ಗಿಡಗಳು ಹಾಕುವ ಏರಿಯಾ ಕಡಿಮೆ ಆದರೆ ಕಡಿಮೆ ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : 140 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ.

ಶ್ರೀ ಡಿ. ಮಂಜುನಾಥ್ : ಈಗ ನೆಡುತೋಪುಗಳನ್ನು ನೆಡುವ ಕೆಲಸ ಕಡಿಮೆ ಆದರೆ ಹಣ ಖರ್ಚು ಸಹ ಕಡಿಮೆ ಆಗುತ್ತದೆ. ಧಾರವಾಡ ಜಿಲ್ಲೆಯಲ್ಲಿ ಈಗ ಹಾವೇರಿ ಆಯಿತು. ಗದಗ್

ಆಯಿತು. ನಿಮ್ಮ ಧಾರವಾಡ ಜಿಲ್ಲೆ ಮೂರು ಜಿಲ್ಲೆ ಆಗಿದೆ. ನಿಮ್ಮ ಧಾರವಾಡ ಜಿಲ್ಲೆಯಲ್ಲಿ 1998-99ನೇ ಸಾಲಿನಲ್ಲಿ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೋ ಅದನ್ನು ವ್ಯವಸ್ಥಿತವಾಗಿ ಮಾಡುತ್ತೇವೆ.

ಅಧ್ಯಕ್ಷರು : ಅವರು ಏನು ಕೇಳುತ್ತಾರೆ ಅಂದರೆ 1995-96ರಲ್ಲಿ ಗಿಡಗಳು ನೆಡುವ ಕಾರ್ಯ ಕಡಿಮೆ ಆಗಿದೆ. ಮತ್ತು ನೀವು ಅಲಾಟ್ ಮಾಡಿದ ಹಣ ಕೂಡ ಖರ್ಚಾಗಿಲ್ಲ. ಏತಕ್ಕೆ ಖರ್ಚು ಆಗಿಲ್ಲ ಎನ್ನುವುದು ಅವರ ಪ್ರಶ್ನೆ. ಈಗ 1995-96ರಲ್ಲಿ 598 ಲಕ್ಷ ರೂಪಾಯಿಗಳಲ್ಲಿ ಖರ್ಚಾಗಿರುವುದು 458 ಲಕ್ಷ. ಹೆಚ್ಚು ಕಡಿಮೆ 140 ಲಕ್ಷ ಖರ್ಚಾಗಿಲ್ಲ. ಏಕೆ ಉಳಿಯಿತು ಎನ್ನುವುದು ನಮ್ಮ ಪ್ರಶ್ನೆ.

ಶ್ರೀ ಡಿ. ಮಂಜುನಾಥ್ : ಅದಕ್ಕೆ ನಾನು ಹೇಳಿದೆ. ಸಸಿಗಳನ್ನು ನೆಡುವ ಏರಿಯಾ ಕಡಿಮೆಯಾಗುತ್ತಾ ಬಂದಿರುವುದರಿಂದ ಹಣ ಕೂಡ ಕಡಿಮೆ ಖರ್ಚಾಗಿದೆ. ನಿಮ್ಮ ಧಾರವಾಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ನಾವು ಯೋಜನೆ ಹಾಕುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : 1995-96ರಲ್ಲಿ ಜಿಲ್ಲಾ ಒಂದೇ ಇತ್ತು. ಆಗ 140 ಲಕ್ಷ ರೂ. ಖರ್ಚಾಗಿಲ್ಲ.

ಅಧ್ಯಕ್ಷರು : ಕಡಿಮೆ ಆಗಿದೆ ಎಂದು ಅವರೇ ಒಪ್ಪಿಕೊಳ್ಳುತ್ತಾರೆ. ಅವರು ಒಪ್ಪಿಕೊಂಡೇ ಈ ಅಂಕಿಅಂಶಗಳನ್ನು ಕೊಟ್ಟಿರುವುದು.

ಶ್ರೀ ಜಗದೀಶ್ ಶೆಟ್ಟರ್ : 1998-99ನೇ ಸಾಲಿನಲ್ಲಿ ಯಾವ ಕೆಲಸ ಕೈಗೊಳ್ಳುತ್ತೀರಿ ಅಂದಾಗ ನಗರಪ್ರದೇಶದ ಹಸಿರೀಕರಣಕ್ಕೆ ಬರೀ ಐದು ಹೆಕ್ಟೇರ್ ಮಾತ್ರ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಇದು ಬಹಳ ಕಡಿಮೆ.

ಶ್ರೀ ಡಿ. ಮಂಜುನಾಥ್ : ಈಗ ಜಾಸ್ತಿ ತೆಗೆದುಕೊಳ್ಳುತ್ತೇವೆ. ಆ ಬಗ್ಗೆ ನಾನು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ವಿಜಾಪುರ ಜಿಲ್ಲೆಗೆ ನಬಾರ್ಡ್ ಆರ್ಥಿಕ ಸಹಾಯದಿಂದ ರಸ್ತೆಗಳ ಅಭಿವೃದ್ಧಿ

382 - ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಯಾವ ಯಾವ ರಸ್ತೆಗಳನ್ನು ನಬಾರ್ಡ್ ಆರ್ಥಿಕ ಸಹಾಯದಿಂದ ತೆಗೆದುಕೊಳ್ಳಲಾಗಿದೆ? (ವಿಧಾನಸಭಾವಾರು ವಿವರ ನೀಡುವುದು)

ಆ) ವಿಜಾಪುರದಿಂದ ಮಸಬನಾಳ ರಸ್ತೆ ತೀವ್ರ ಹದಗೆಟ್ಟಿದ್ದು (ಉಕ್ಕಲಿ ಮಾರ್ಗವಾಗಿ) ಬಸ್ಸುಗಳು ಹೋಗದ ರೀತಿಯಲ್ಲಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?